ಸಿ.ಸಿ.ಸಂಃ1745/2025.

ಪ್ರಧಾನ **ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಸಾಗರ**

**ಸಿ.ಸಿ.ನಂ.1745/2025.**

**ಪಿರ್ಯಾದಿ** ಃ-

ಮಹಾಂತಯ್ಯ ಚೆನ್ನಯ್ಯ ಹಿರೇಮಠ್ ಬಿನ್
ಚೆನ್ನಯ್ಯ, ಸುಮಾರು 53 ವರ್ಷ,
ವಾರ್ಡ್ ನಂ.17, # 423,
ಜಂಬಗಾರು ಬಡಾವಣೆ, ವಡ್ನಾಲ್ ರೋಡ್,
ಸಾಗರ ಟೌನ್, ಶಿವಮೊಗ್ಗ ಜಿಲ್ಲೆ.

**-ವಿರುದ್ಧ-**

**ಆರೋಪಿ** ಃ-

ಎಸ್.ಎಂ. ದೇಸಾಯಿ ಬಿನ್ ಮಾರುತಿ ದೇಸಾಯಿ,
ಸುಮಾರು 38 ವರ್ಷ,
ಸಾಕೀನ ಕೋಟೂರು, ಶಿವಾಪುರ ಅಂಚೆ,
ಯರಗಟ್ಟಿ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಭಾರತ ದಂಡ ಪಕ್ರಿಯಾ ಸಂಹಿತೆ ಕಲಂ. 313 ರ ಅಡಿಯಲ್ಲಿ ಆರೋಪಿಯ ಹೇಳಿಕೆ

ಪ್ರಶ್ನೆ1ಃ ನೀವು ಈ ಕೇಸಿನಲ್ಲಿ ಪಿರ್ಯಾದುದಾರರ ಪರ ಮಾಡಿರುವ ಸಾಕ್ಷಿಗಳ ಹೇಳಿಕೆಗಳನ್ನು ಕೇಳಿದ್ದೀರಾ?

ಉತ್ತರಃ

**ಪ್ರಶ್ನೆ2ಃ ಪ್ರಾ.ಸಾ.**1 ಮಹಾಂತಯ್ಯ ಚೆನ್ನಯ್ಯ ಹಿರೇಮಠ್ ಇವರು **ತಮ್ಮ ಸಾಕ್ಷ್ಯದಲ್ಲಿ,** ಆರೋಪಿಯಾದ ನೀವು ದಿನಾಂಕಃ10.01.20222 ರಂದು ತಮ್ಮ ಗೃಹ ಕೃತ್ಯದ ಅಡಚಣೆ ನಿವಾರಿಸುವ ಸಲುವಾಗಿ ಪಿರ್ಯಾದುದಾರರಿಂದ ರೂ.1,52,000/-(ಒಂದು ಲಕ್ಷದ ಐವತ್ತೆರೆಡು ಸಾವಿರ)ಗಳನ್ನು ನಗದಾಗಿ ಪಡೆದುಕೊಂಡಿದ್ದು, ಸದರಿ ಹಣವನ್ನು ಒಂದು ವರ್ಷದ ಒಳಗಾಗಿ ಮರುಪಾವತಿ ಮಾಡುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ-

**ಪ್ರಶ್ನೆ3ಃ ಪ್ರಾ.ಸಾ.**1 ರವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆ **ಸಾಕ್ಷ್ಯದಲ್ಲಿ,** ಆರೋಪಿಯಾದ ನೀವು ಸದರಿ ಸಾಲವನ್ನು ನಿಗದಿತ ಅವಧಿಯಲ್ಲಿ ಮರುಪಾವತಿಸದೇ ಇದ್ದಾಗ ಪಿರ್ಯಾದುದಾರರು ಸಾಲವನ್ನು ಮರುಪಾವತಿಸುವಂತೆ ಕೇಳಿದಾಗ ಒಂದಲ್ಲ ಒಂದು ಸಬೂಬು ಹೇಳುತ್ತಾ ತಮ್ಮಲ್ಲಿ ನಗದು ಇಲ್ಲ ಚೆಕ್ ಮೂಲಕ ಪಡೆದುಕೊಳ್ಳಿ ಎಂದು ಆರೋಪಿಯೇ ಬರವಣಿಗೆ ಮಾಡಿಕೊಂಡು ಒಂದು

ದಿನಾಂಕಃ23.09.2024 ರಂದು ರೂ.1,52,00,000/-(ಒಂದು ಲಕ್ಷದ ಐವತ್ತೆರೆಡು ಸಾವಿರ)ಗಳಿಗೆ ನೀವು ಖಾತೆ ಹೊಂದಿರುವ ಇಂಡಿಯನ್ ಓವರ್‌ಸೀಸ್ ಬ್ಯಾಂಕ್, ಮುನವಳ್ಳಿ ಶಾಖೆಯ ಚೆಕ್.ನಂ.965665 ರ ಮೇಲೆ ದಿನಾಂಕಃ23.09.2024 ಎಂದು ನಮೂದಿಸಿ ಸಹಿ ಮಾಡಿ ನಗದೀಕರಿಸಿಕೊಳ್ಳುವಂತೆ ಪಿರ್ಯಾದುದಾರರಿಗೆ ನೀಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ4ಃ ಪ್ರಾ.ಸಾ.1 ಅವರು ಮುಂದುವರೆದ ಮುಖ್ಯ ವಿಚಾರಣೆ ಸಾಕ್ಷ್ಯದಲ್ಲಿ, ಆರೋಪಿ ನೀಡಿದ ಸದರಿ ಚೆಕ್ ನ್ನು ಪಿರ್ಯಾದುದಾರರು ತಾವು ಖಾತೆ ಹೊಂದಿರುವ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಭೀಮನೇರಿ ಶಾಖೆಯಲ್ಲಿ ದಿನಾಂಕಃ27.09.2024 ರಂದು ನಗದೀಕರಿಸಲು ಹಾಜರುಪಡಿದಾಗ ಸದರಿ ಚೆಕ್ ಆರೋಪಿ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ "ಫಂಡ್ಸ್ ಇನ್ ಸಫಿಷಿಯಂಟ್" ಎಂಬ ಷರಾದೊಂದಿಗೆ ದಿನಾಂಕ 30.09.2024 ರಂದು ಚೆಕ್ ಅಮಾನ್ಯವಾಗಿ ವಾಪಸ್ಸು ಬಂದಿರುತ್ತದೆ ಎಂದು ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ5ಃ ಪ್ರಾ.ಸಾ.1 ರವರು ಮುಂದುವರೆದು ತಮ್ಮ ಮುಖ್ಯ ವಿಚಾರಣೆ ಸಾಕ್ಷ್ಯದಲ್ಲಿ ಈ ಬಗ್ಗೆ ಪಿರ್ಯಾದುದಾರರು ಆರೋಪಿಗೆ ತಮ್ಮ ವಕೀಲರಿಂದ ದಿನಾಂಕಃ05.10.2024 ರಂದು ನೋಟೀಸನ್ನು ಕಳುಹಿಸಿದ್ದು, ಸದರಿ ನೋಟೀಸು ಆರೋಪಿಗೆ ದಿನಾಂಕಃ23.10.2024 ರಂದು ಆರೋಪಿಗೆ ಖುದ್ದು ಜಾರಿಯಾಗಿರುತ್ತದೆ ಎಂದು ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ6ಃ ಪ್ರಾ.ಸಾ.1 ರವರು ಮುಂದುವರೆದು ತಮ್ಮ ಮುಖ್ಯ ವಿಚಾರಣೆ ಸಾಕ್ಷ್ಯದಲ್ಲಿ ಸದರಿ ನೋಟೀಸು ಜಾರಿಯಾದರೂ ಸಹ ನೀವು ನಿಗದಿತ ಅವಧಿಯೊಳಗೆ ಸದರಿ ಚೆಕ್ಕಿನಲ್ಲಿ ಹೇಳಿರುವ ಹಣವನ್ನು ಪಾವತಿ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ7ಃ ಪ್ರಾ.ಸಾ.1 ರವರು ಮುಂದುವರೆದು ಆದ್ದರಿಂದ ನೀವು ನೆಗೋಷಿಯೇಬಲ್ ಇನ್‌ಸ್ಟ್ರುಮೆಂಟ್ ಕಾಯ್ದೆ ಕಲಂ 138 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ ಎಂದು ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 8ಃ ನಿಮ್ಮ ಪರ ಯಾರಿಗಾದರೂ ಸಾಕ್ಷಿ ಮ್ಹಾಡಿಸುತ್ತೀರಾ?

ಉತ್ತರಃ

ಪ್ರಶ್ನೆ 9ಃ ನೀವು ಹೆಚ್ಚಿಗೆ ಏನಾದರೂ ಹೇಳುವುದು ಇದೆಯಾ?

ಉತ್ತರಃ

**(ದಿಃ29.08.2025 ರಂದು ಮೇಲ್ಕಂಡ ಹೇಳಿಕೆಯು ಆರೋಪಿಯಿಂದ ನೀಡಲ್ಪಟ್ಟಿದ್ದು ನಿಜವಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸಿದೆ)**

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು
**ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಸಾಗರ.**